ಅ)

1) ಕುಂಬಾರಕೊಪ್ಪಲಿನಲ್ಲಿ ಈಗಾಗಲೇ ಒಂದು ಪಶು ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ.

2) ತೊಣಚಿಕೊಪ್ಪಲಿನಲ್ಲಿ ಪಶುವೈದ್ಯ ಸಂಸ್ಥೆ ಪ್ರಾರಂಭಿಸಲು ಕೋರಿಕೆ ಬಂದಿದ್ದು, ಇದನ್ನು 1996-97ನೇ ಸಾಲಿನಲ್ಲಿ ಆಧ್ಯತೆಯ ಮೇಲಿ ಪರಿಗಣಿಸಲಾಗುವುದು

3) ಒಂಟಿಕೊಪ್ಪಲಿನಲ್ಲಿ ಪಶುವೈದ್ಯ ಸಂಸ್ಥೆಯನ್ನು ಪ್ರಾರಂಭಿಸಲು ಯಾವ ಕೋರಿಕೆಯೂ ಬಂದಿರುವುದಿಲ್ಲ, ಕೋರಿಕೆ ಬಂದಲ್ಲಿ ಇದನ್ನು ಸಹ ಆಧ್ಯತೆಯ ಮೇಲೆ ಪರಿಗಣಿಸಲಾಗುವುದು.

ಮೈಸೂರು ನಗರದ ಲೋಕೋಪಯೋಗಿ ಇಲಾಖೆಯ ಕಟ್ಟಡಗಳ ಬಗ್ಗೆ

313 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಕಟ್ಟಡಗಳು ಯಾವುವು?

ಆ) ಈ ಕಟ್ಟಡಗಳ ದುರಸ್ಥಿ ಕಾರ್ಯ ಹಾಗೂ ಸುಣ್ಣ ಬಣ್ಣ ಬಳಿಯುವ ಕಾಮಗಾರಿಗಳು ಸಕಾಲಕ್ಕೆ ನಡೆಸಲಾಗುತ್ತಿದೆಯೇ, ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಇ) ಈ ಕಟ್ಟಡಗಳಿಗೆ ದುರಸ್ಥಿಕಾರ್ಯ ಹಾಗೂ ಸುಣ್ಣ ಬಳಿಯುವ ಕಾರ್ಯಕ್ಕೆ ಸರ್ಕಾರ ಈ ವರ್ಷದಲ್ಲಿ ಎಷ್ಟು ಹಣ ಕಾಯ್ದಿರಿಸಿದೆ, ಎಷ್ಟು ಹಣ ಖರ್ಚಾಗಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿಗಳು) :

ಅ) ಸರ್ಕಾರ ವಸತಿಗೃಹಗಳು 75

ಸರ್ಕಾರದ ಕಛೇರಿ ಕಟ್ಟಡಗಳು 125

ಒಟ್ಟು 200

ಆ) ಅನುದಾನದ ಲಭ್ಯತೆಗೆ ಅನುಗುಣವಾಗಿ ಆಸ್ಪತ್ರೆ ಕಟ್ಟಡಗಳಿಗೆ ಹೊರತಾಗಿ ಬೇರೆ ಕಟ್ಟಡಗಳಿಗೆ ಸುಣ್ಣ ಬಣ್ಣಗಳನ್ನು ಯೋಜನೇತರ ವೆಚ್ಚದಲ್ಲಿ ಅನುದಾನದ ಕಡಿತವಿರುವುದರಿಂದ ಮಾಡುತ್ತಿಲ್ಲ.

ಇ) ಸರ್ಕಾರದ ಕಛೇರಿ ಕಟ್ಟಡಗಳಿಗೆ 31.50 ಲಕ್ಷ ರೂ.ಗಳು ಮತ್ತು ಸರ್ಕಾರದ ವಸತಿಗೃಹಗಳಿಗೆ 5.00 ಲಕ್ಷ ರೂ.ಗಳು ಒದಗಿಸಿದ್ದು ಅದರ ಪೈಕಿ ಜನವರಿ 96ರವರೆಗೆ 13.69 ಲಕ್ಷ ರೂ.ಗಳು ಮತ್ತು 1.37 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಕದ್ರಾ ಜಲ ವಿದ್ಯುತ್ ಯೋಜನೆ

508 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕದ್ರಾ ಜಲವಿದ್ಯುತ್ ಯೋಜನೆಗೆ ಕುವೈತ್ ದೇಶ ಏನಾದರೂ ಆರ್ಥಿಕ ನೆರವು ನೀಡುವುದಾಗಿ ಹೇಳಿದೆಯೇ?

ಆ) ಹಾಗಿದ್ದರೆ ಎಷ್ಟು ನೆರವನ್ನು ನೀಡುವುದಾಗಿ ಹೇಳಿದೆ, ಯಾವಾಗ ನೀಡುವುದು?

ಇ) ಇದುವರೆಗೆ ಎಷ್ಟಾದರೂ ಹಣವನ್ನು ಬಿಡುಗಡೆ ಮಾಡಲಾಗಿದೆಯೇ?

ಈ) ಕಲ್ಕತ್ತಾ ಮುಂಬೈ ನಗರಗಳ ಮಾದರಿಯಲ್ಲಿ ಬೆಂಗಳೂರು ನಗರದಲ್ಲೂ ವಿದ್ಯುತ್ ವಿತರಣೆಯನ್ನು ಬೆಂಗಳೂರು ನಗರದಲ್ಲೂ ವಿದ್ಯುತ್ ವಿತರಣೆಯನ್ನು

ಖಾಸಗಿಯವರಿಗೆ ವಹಿಸಲು ಉದ್ದೇಶಿಸಿದಯೇ? ಇದುವರೆಗೆ ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕುವೈತ್ ದೇಶದ ಕುವೈತ್ ಫಂಡ್ ಫಾರ್ ಅರಬ್ ಎಕನಾಮಿಕ್ ಡೆವೆಲೇಪ್‌ಮೆಂಟ್ ಸಂಸ್ಥೆಯವರು ಕದ್ರಾ ಅಣೆಕಟ್ಟಿನ ಸಿವಿಲ್ ಕಾಮಗಾರಿಗಳ ಸಲುವಾಗಿ ನೆರವನ್ನು ನೀಡಲು 1986ರಲ್ಲಿ ಒಪ್ಪಿರುತ್ತಾರೆ.

ಆ) ಕಾಳಿನದಿ 2ನೇ ಹಂತದ ಕದ್ರಾ ಅಣೆಕಟ್ಟಿನ ಸಿವಿಲ್ ಕಾಮಗಾರಿಗಳಿಲಾಗಿ 7ಮಿಲಿಯನ್ ಕುವೈತ್ ದಿನಾರದ ಆರ್ಥಿಕ ನೆರವನ್ನು ಸಾಲ ರೂಪದಲ್ಲಿ ಕೊಟ್ಟಿರುತ್ತಾರೆ. ಈ ಆರ್ಥಿಕ ನೆರವು 1987-88ರಲ್ಲಿ ಶುರುವಾಗಿರುತ್ತದೆ.

ಇ) ಈ ಆರ್ಥಿಕ ನೆರವಿನಲ್ಲಿ ಇಲ್ಲಿಯವರೆಗೆ, 3.10 ಮಿಲಿಯನ್ ಕುವೈತ್ ದಿನಾರ (ಅಂದರೆ 28.21 ಕೋಟಿ ರೂ.ಗಳು) ದಷ್ಟು ನೆರವು ಕರ್ನಾಟಕ ವಿದ್ಯುತ್ ನಿಗಮಕ್ಕೆ ಸಾಲದ ರೂಪದಲ್ಲಿ 1988-89ರಿಂದ ಜನವರಿ 1996ರ ವರೆಗೆ ಕೊಟ್ಟಿರುತ್ತಾರೆ.

ಈ) ಇಲ್ಲ

ತಡಸ - ಕುಮಟಾ ರಸ್ತೆ ಅಗಲಗೊಳಿಸುವುದು

214 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಡಸ - ಕುಮಟಾ ರಸ್ತೆ ಅಗಲಗೊಳಿಸುವ ಕೆಲಸ ಯಾವಾಗ ಪ್ರಾರಂಭವಾಗುವುದು;

ಆ) ಸಿರ್ಸಿ - ವಟ್ಟ - ಕಾರವಾರ ರಸ್ತೆಗೆ ಈ ವರ್ಷ ಸರ್ಕಾರದಿಂದ ಅನುದಾನ ಬಿಡುಗಡೆಯಾಗುವುದೇ?

ಇ) ಖಾನಾಪುರ - ತಾಳಗುಪ್ಪಾ ರಸ್ತೆ ಅಗಲಗೊಳಿಸುವ ಕೆಲಸ ಯಾವಾಗ ಪ್ರಾರಂಭವಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ತಡಸ - ಕುಮಟಾ ರಸ್ತೆಯ 12.80 ಕಿ.ಮೀ. ಭಾಗವನ್ನು ಅಗಲಗೊಳಿಸುವ ಕೆಲಸವು ಪ್ರಗತಿಯಲ್ಲಿದೆ.

ಆ) 1995-96ನೇ ಸಾಲಿನಲ್ಲಿ ಈ ರಸ್ತೆಯ ಅಭಿವೃದ್ಧಿಗೆ ರೂ. 2.70 ಲಕ್ಷ ಅನುದಾನ ಒದಗಿಸಲಾಗಿದೆ.

ಇ) ಖಾನಾಪುರ - ತಾಳಗುಪ್ಪ ರಸ್ತೆಯ ಒಟ್ಟು 32 ಕಿಮೀ. ಉದ್ದದ ಭಾಗ ಅಗಲಗೊಳಿಸುವ ಕೆಲಸ ಪ್ರಗತಿಯಲ್ಲಿದೆ.

ಅಂಕೋಲ ಕ್ಷೇತ್ರದ ಪ್ರವಾಸಿ ತಾಣ ಕುರಿತು

215 - ಶ್ರೀ ವಿಶ್ವೇಶ್ವರ ಹೆಗಡೆ (ಅಕೋಲ) : ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಕೋಲ ಕ್ಷೇತ್ರದ ಸಿರ್ಸಿ-ಯಲ್ಲಾಪುರ ಅಂಕೋಲ ತಾಲ್ಲೂಕಿನಲ್ಲಿರುವ ಪ್ರವಾಸಿ ತಾಣಗಳೆಷ್ಟು? ಅಧಕ್ಕೆ ಸರ್ಕಾರ ಕಳೆದ ಮೂರು ವರ್ಷದ ಅವಧಿಗೆ ನೀಡಿದ ಅನುದಾನ ಎಷ್ಟು? (ವರ್ಷವಾರು ವಿವರ ನೀಡುವುದು)

ಆ) ಪ್ರವಾಸಿ ತಾಣಕ್ಕೆ ಈ ವರ್ಷ ವಿಶೇಷ ಅನುದಾನ ನೀಡುವ ಉದ್ದೇಶವಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಉಪ ಮುಖ್ಯಮಂತ್ರಿಗಳು) :